# ಕೈತೋಟಕ್ಕೂ ಅಲಂಕಾರ

ನದಿಯಲ್ಲಿ ಸಿಗುವ ನುಣುಪು ಕಲ್ಲುಗಳು ಬಹಳ ಆಕರ್ಷಕ. ಅವುಗಳಿಗೆ ಕಲ್ಪನೆಯಂತೆ ಬಣ್ಣ ಬಳಿದರೆ ಇನ್ನೂ ಚೆಂದ. ಕೊಡಗು ಜಿಲ್ಲೆಯ ಕಿಗ್ಗಾಲು ಗ್ರಾಮದ ಪುಟಾಣಿ ಭವಿಶ್, ಬೇಸಿಗೆಯಲ್ಲಿ ನದಿಯಲ್ಲಿ ನುಣುಪು ಕಲ್ಲುಗಳನ್ನು ಆಯ್ದು ಅವುಗಳಿಗೆ ಬಣ್ಣ ಬಳಿದು ಮನೆಯ ಮುಂದಿನ ಕೈತೋಟದಲ್ಲಿ ಇಟ್ಟಿರುವುದು ಗಮನ ಸೆಳೆಯುತ್ತಿದೆ. ಆದರೆ ಮಳೆಗಾಲದಲ್ಲಿ ಎತ್ತಿ ಒಳಗಿಡಬೇಕಂತೆ.

—ಕಿಗ್ಗಾಲು ಜಿ. ಹರೀಶ್ ಮೂರ್ನಾಡು





# ನೀರಿನ ನಲ್ಲಿಗೆ ಪೆಡಲ್

ಎಲ್ಲೆಲ್ಲೂ ಕೊರೊನಾದೇ ಸದ್ದು! ಸಾಂಕ್ರಾಮಿಕವಾಗಿ ಜಗತ್ತೆಲ್ಲಾ ಹರಡಿಕೊಂಡ ಮಹಾಮಾರಿಯಿಂದ ತಪ್ಪಿಸಿಕೊಳ್ಳಲು ಸ್ಯಾನಿಟೈಸರ್, ಮಾಸ್ಕ್‌ನಂಥ ಹಲವಾರು ಮುಂಜಾಗ್ರತೆಯ ಕ್ರಮಗಳನ್ನು ಅನುಸರಿಸುತ್ತಿದ್ದಾರೆ. ಹೊರಗೆ ಅಗತ್ಯವಾಗಿ ಹೋಗಬೇಕಾದ ಸಂದರ್ಭಗಳಲ್ಲಂತೂ ಏನು ಮುಟ್ಟಿದರೂ ಕೈ ತೊಳೆಯುವ ಕ್ರಮ ಬೆಳೆಸಿಕೊಳ್ಳಬೇಕಾಗುತ್ತದೆ.

ದೈನಂದಿನ ವ್ಯವಹಾರಗಳಲ್ಲಿ ಬಾಗಿಲಿನ ಹಿಡಿ, ಎಟಿಎಂ ಮುಂತಾದವುಗಳನ್ನು ಕೈಬೆರಳಿನ ಹಿಂಬದಿಯಿಂದ ಮುಟ್ಟುವ ರೂಢಿ ಬಂದಿದೆ! ಆದರೆ ಸಾರ್ವಜನಿಕ ಸ್ಥಳಗಳಲ್ಲಿ ಮತ್ತೆ ಕೈ ತೊಳೆಯುವ ನೀರಿನ ನಲ್ಲಿಯನ್ನು ಮುಟ್ಟದಿರಲಾಗುತ್ತದೆಯೇ? ಅದಕ್ಕಾಗಿಯೆ ಕಾಲಿಂದ ಒತ್ತುವ ಪೆಡಲ್ ಚಾಲಿತ ನೀರಿನ ನಲ್ಲಿ ಚಲಾವಣೆಗೆ ಬಂದಿದೆ.

—ಜೀವನ್ ಶೆಟ್ಟಿ, ಸಂತೆಕಟ್ಟೆ

# ಕೊರೊನಾ ವಿಸ್ಮಯ

ಕೊರೊನಾ ಸುದ್ದಿಯನ್ನು ಹಾಕುವಾಗ ಟೀವಿವಾಹಿನಿಗಳಲ್ಲಿ ಹಾಕುತ್ತಿದ್ದ ವೈರಸ್‌ನ ಚಿತ್ರಗಳನ್ನು ನೀವು ನೋಡಿರಬಹುದು. ಈ ಗಿಡವೂ ಅದನ್ನೇ ನೋಡಿತ್ತು ಅನಿಸುತ್ತದೆ. ತನ್ನಲ್ಲಿ ಕೊರೊನಾ ರೋಗಾಣುವಿನ ಕಾಲ್ಪನಿಕ ಚಿತ್ರವನ್ನೇ ಹೋಲುವ ಕಾಯಿಯೊಂದನ್ನು ಬಿಟ್ಟಿದೆ. ಅದರ ಸಮೀಪಕ್ಕೆ ಹೋಗಿ ನೋಡಿದಾಗ ಅದು ನಿಜವಾಗಿಯೂ ಚೂಪಾದ ಮುಳ್ಳಿನಂತಿದ್ದು, ದುಂಡಗಾಗಿತ್ತು. ಗಿಡದಲ್ಲಿ ಹಳದಿ ಬಣ್ಣದ 'ಗಂಟೆ ಹೂವು' ಎಂದು ಸ್ಥಳೀಯವಾಗಿ ಕರೆಯು ಜಾತಿಯ ಹೂವು.

—ಅನೀಶ್ ಬಿ. ಕೊಪ್ಪ

